ಅವರಿಂದ ಕಸಿದುಕೊಂಡು ಹೊತ್ತು ಓಡಿ ದೇವಸ್ಥಾನದ ಬಾಗಿಲಲ್ಲಿ ನಿಂತಿರುತ್ತಿದ್ದ. ಅವರು ಬಂದ ಮೇಲೆ, ''ಆಯಿತು, ಪೂಜೆ ಮಾಡಿಕೊಳ್ಳಿ, ಏನು ಕೇಶ ಹೀಗೆ ಮಾಡಿದ ಅಂದುಕೊಳ್ಳಬೇಡಿ, ನಾನೂ ಮಿಂದು ಮಡಿಯಾದವನೇ. ನೀವು ನಡೆಯುತ್ತಿದ್ದ ಲೆಕ್ಕದಲ್ಲಿ ಇದನ್ನು ಹೊತ್ತು ಇಲ್ಲಿ ಬರುವುದು ಮಧ್ಯಾಹ್ನವಾಗುತ್ತಿತ್ತು'' ಎಂದು ಅವರಿಗೆ ಹೇಳಿ ಮತ್ತಿನ್ನಾವುದೋ ಲೋಕ ಕಲ್ಯಾಣದ ಕಾರ್ಯಕ್ಕೆ ನುಗ್ಗುತ್ತಿದ್ದ. ಅಂಥ ಕಾರ್ಯಗಳಿಗೆ ಹೀಗೇ ಅಂತ ವೇಳಾಪಟ್ಟಿ ಇಲ್ಲ. ಇವತ್ತು ಸಹಾಯ ಮಾಡಿದ ಅಂತ ನಾಳೆ ಅವನನ್ನು ನೆಚ್ಚುವಂತೆಯೂ ಇಲ್ಲ.

ಅಜ್ಜಿಮನೆಯಲ್ಲಿ ಅವನು ಇದ್ದಾಗ ಒಬ್ಬರು ಹಿರಿಯರು ಬಂದರು. ಅವರು ತಾನೆಷ್ಟು ದೊಡ್ಡ ದಾನಿ ಎಂದು ನಮಗೆ ಮನವರಿಕೆ ಮಾಡಿಕೊಡಲು ತುಂಬ ಪ್ರಯತ್ನ ಮಾಡಿದರು. ಅವರು ಹಾಗೆ ಹೇಳತೊಡಗಿದಷ್ಟೂ ಅವರ ದಾನ ಮುಂತಾದ ದೊಡ್ಡ ಮಾತುಗಳು ನಮಗೆ ಅಪಹಾಸ್ಯದಂತೆಯೇ ಕೇಳತೊಡಗಿದವು. ಅವರು ಹೋದ ಮೇಲೆ ನಾವು ಮಕ್ಕಳು, ನಮ್ಮ ನಮ್ಮಲ್ಲೇ ಅವರ ಮಾತುಗಳನ್ನು ಅಣಕಿಸಿ ಹೇಳುತ್ತಿದ್ದಾಗ ಕೇಶಪ್ಪಚ್ಚಿಯೂ ಆ ಮಾತುಗಳನ್ನು ನಗೆಯಾಡುತ್ತಾ ಕೇಳಿದ. ಬಳಿಕ ಒಂದು ಗಾದೆ ಮಾತು ಹೇಳಿದ: ''ಇರುವೆ ಕಣ್ಣಿಗೆ ಉಚ್ಚೆ ಪ್ರಳಯ.''

ನಾವೆಲ್ಲರೂ ಹೋ ಎಂದು ನಗತೊಡಗಿದೆವು. ಇದಾವ ಇರುವೆ ಮಾರಾಯ? ಅದಕ್ಕೆ ಉಚ್ಚೆ ಕಂಡಿದ್ದೆಲ್ಲಿ? ಹೊಯ್ದವರು ಯಾರು? – ಏನೇನೋ ಹೇಳಿ ಮತ್ತೆಮತ್ತೆ ಆ ಗಾದೆಮಾತನ್ನು ನೆನೆಸಿಕೊಂಡು ನಕ್ಕೆವು. ''ಊರಿಗೆಲ್ಲಾ ಆಚಾರ ಹೇಳಿ ಮನೆಒಲೆಲಿ ಉಚ್ಚೆ ಹೊಯ್ದ'' ಇದು ಅವನು ನಮಗೆ ಹೇಳಿಕೊಟ್ಟ ಇನ್ನೊಂದು ಗಾದೆ. ಇಂಥ ಗಾದೆ ಮಾತುಗಳನ್ನು ಅದೆಷ್ಟು ಸಮರ್ಪಕವಾಗಿ ಅವನು ಉಪಯೋಗಿಸುತ್ತಿದ್ದ ಎಂದರೆ, ಅದರ ಅರ್ಥವೂ ಆಗಲೇ ನಮಗೆ ಮನದಟ್ಟಾಗಿಬಿಡುತ್ತಿತ್ತು. ಹಿರಿಯರ ಎದುರು ಆ ಗಾದೆ ಮಾತುಗಳನ್ನು ಹೇಳಲು ಹೋಗಿ ಬೈಸಿಕೊಂಡೆವು. ''ಕೇಶಾ, ಸಣ್ಣ ಮಕ್ಕಳಿಗೆ ಇಂಥ ಗಲೀಜು ಗಾದೆ ಹೇಳಿಕೊಡುವುದಾ ನೀನು?'' ಎಂದು ಕೇಶಣ್ಣನಿಗೂ ಪೂಜೆಯಾಗುತ್ತಿತ್ತು. ಅಂಥ ಸಂದರ್ಭಗಳನ್ನು ಅವನು ನಿರ್ವಹಿಸುತ್ತಿದ್ದ ರೀತಿಯೇ ತುಂಬ ವಿಶಿಷ್ಟ. ''ಹೆ – ಹೆ – ಹೆ – ಅದೆ – ಕೋಡ (ಮಂಗ) – ಹೋ – ಹೋ – ಹೋ'' ಎಂದು ಹಿತ್ತಿಲಿಗೆ ಕಲ್ಲು ಹಿಡಿದು ಓಡಿಬಿಡುತ್ತಿದ್ದ. ಇನ್ನು ಅವನನ್ನು ಹಿಡಿಯುವವರು ಯಾರು?

ಒಂದು ಮಧ್ಯಾಹ್ನವಂತೂ ಅಜ್ಜಿಮನೆಯ ದೇವಾಲಯದಲ್ಲಿ ಕೋಲಾಹಲ ಎಬ್ಬಿಸಿಬಿಟ್ಟ. ಬಾವಿಯಿಂದ ನೀರು ತಂದು ಸದಾಶಿವಲಿಂಗಕ್ಕೆ ನೀರು ಹೊಯ್ದಿದ್ದೇ ಹೊಯ್ದಿದ್ದು. ಅಜ್ಜನಿಗೆ ಪೂಜೆ ಮಾಡಲು ಬಿಡಲೇ ಇಲ್ಲ ''ಅಭಿಷೇಕಪ್ರಿಯ ಅಲ್ಲವೋ ಅವನು? ಅವನಿಗಿವತ್ತು ಸಾಕು ಬೇಕು ಮಾಡಿಬಿಡುತ್ತೇನೆ.'' ಎಂದು ಹತ್ತು ಹದಿನೈದು ಕೊಡ ನೀರು ತಂದು ಲಿಂಗಕ್ಕೆ ಸುರುವುತ್ತಲೇ ಇದ್ದ. ನಡುನಡುವೆ ಒಮ್ಮೊಮ್ಮೆ, ''ಇವತ್ತು ಈಶ್ವರನಿಗೆ ಥಂಡಿ ಆಗಿಬಿಡಬೇಕು. ಹಾ, ಹಾಗೆ ಅವನಿಗೆ ಜಳಕ ಮಾಡಿಸ್ತೆ'' ಎಂದು ಘೋಷಿಸುತ್ತಾ ಬಾವಿಯಿಂದ ನೀರೆತ್ತಿದ. ಈಶ್ವರ ಮಾತಾಡಲಿಲ್ಲ. ಅಜ್ಜ ಹೇಳಿದ್ದು ಕೇಶಪ್ಪಚ್ಚಿ ಕೇಳಲಿಲ್ಲ. ಅಜ್ಜಮ್ಮ ಈ ನಡುವೆ ಒಂದು ಜಾಣತನ ಮಾಡಿದಳು. ಅವಳು ಹೇಳಿಕೊಟ್ಟಂತೆ ಬಾವಿಯ ಹಗ್ಗ ಕಳಚಿ ಮೆತ್ತಿ ಮೇಲೆ ಸಾಗಿಸಿಬಿಟ್ಟೆವು. ಈ ಸಂದರ್ಭದಲ್ಲಿ ನಾವು ಅಜ್ಜಮ್ಮನ ಪಕ್ಷ ವಹಿಸಿದರೂ ಕೇಶಪ್ಪಚ್ಚಿಯ ಮುಂದಿನ ನಡೆ ಏನೆಂದು ಕುತೂಹಲದಿಂದ ಗಮನಿಸುತ್ತಲೇ ಇದ್ದೆವು. ಪುಣ್ಯಾತ್ಮ, ನಾವು ನೋಡುತ್ತಿದ್ದಂತೆ ಕೊಡದೊಂದಿಗೆ ಬಾವಿಗೆ ಹಾರಿಯೇ ಬಿಟ್ಟ. ಬೇಸಿಗೆ ದಿನವಾದ್ದರಿಂದ ನೀರು ಅಷ್ಟೊಂದಿರಲಿಲ್ಲ. ಕೊಡದಿಂದ ನೀರೆತ್ತಿ ತನ್ನ ತಲೆಗೇ ಬಾವಿಯೊಳಗೇ ಸುರುವಿಕೊಳ್ಳತೊಡಗಿದ. ''ನೋಡು ಕೇಶಾ, ನೀನು ಹೀಗೇ ಮಾಡುತ್ತಿದ್ದರೆ, ನಿನ್ನ ಅಣ್ಣ ಅತ್ತಿಗೆಗೆ ಹೇಳಬೇಕಾಗುತ್ತದೆ. ಇಲ್ಲಿ ಬಂದು ನಿನಗೇನಾದರೂ ಹೆಚ್ಚು ಕಡಿಮೆ ಆದರೆ ಏನು ಗತಿ?'' ಎಂದು ಪೂಜೆ ಮುಗಿಸಿಬಂದ ಅಜ್ಜ ಕಣ್ಣರಳಿಸಿ ಹೇಳಿದಾಗ ಒಮ್ಮೆಲೇ ಕೇಶಪ್ಪಚ್ಚಿಯ ಚಟುವಟಿಕೆ ಸ್ತಬ್ಧವಾಯಿತು.